೨. ಪ್ರತಿ ಬ್ಲಾಕ್ ಅಥವಾ ಘಟಕದಲ್ಲಿ ಆದಷ್ಟು ಮಟ್ಟಿಗೆ ೨೦ ನಿವೇಶನಗಳು ಒಂದೇ ಜಾಗದಲ್ಲಿರಬೇಕು.

೩. ಗೋಡೆಗಳೂ ನೇರಿದಂತೆ, ಮನೆಯ ವಿಸ್ತೀರ್ಣ ೨೦.೯ ಸದರ ಮೀಟರ್‌ಗಳಾಗಿರ ಬೇಕು.

೪. ಕಡಿಮೆ ವೆಚ್ಚದಲ್ಲಿ ಸ್ಥಳೀಯವಾಗಿ ದೊರೆಯುವ ಸಾಮಾನುಗಳನ್ನು ಉಪಯೋಗಿಸಿ ಅತಿ ಕಡಿಮೆ ವೆಚ್ಚದಲ್ಲಿ ಮನೆಗಳನ್ನು ನಿರ್ಮಿಸಬೇಕು.

೫) ಈ ಯೋಜನೆಯಲ್ಲಿ ೨ನೇ ಹಂತದ ೧೯೮೬–೮೭ ೮೭–೮೮ರ ಒಳಗೆ ಒಟ್ಟು ೧೦೬೦೮ ಮನೆಗಳನ್ನು ತೆಗೆದುಕೊಂಡಿದ್ದು, ಅವುಗಳಲ್ಲಿ ೩೧೦ ಮನೆಗಳನ್ನು ಮಾತ್ರ ಪೂರ್ಣಗೊಳಿಸಬೇಕಾಗಿದೆ. ಇವುಗಳು ವಿವಿಧ ಹಂತದಲ್ಲಿರುತ್ತದೆ. ೧೯೮೮–೮೯ನೇ ಸಾಲಿನಲ್ಲಿ ೩ನೇ ಹಂತದ ೧೯೮೭–೮೮ರಲ್ಲಿ ಮಂಜೂರಾದ ೫೨೧೬ ಮನೆಗಳ ನಿರ್ಮಾಣ ಕಾರ್ಯವು ವಿವಿಧ ಹಂತಗಳಲ್ಲಿದೆ.

ತುಮಕೂರು ನಗರದ ಬಾಳನ ಕಟ್ಟೆಯ ಪರಿಸರದ ಬಗ್ಗೆ

೭೯೨ (೪೪೦) ಶ್ರೀ ಶಿವಸಂಜಪ್ಪ, (ಗುಬ್ಬಿ).—ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

೧) ತುಮಕೂರು ನಗರದ ಬಾಳನಕಟ್ಟೆ ಮೈದಾನದಲ್ಲಿ ರಂಗಮಂದಿರವನ್ನು ಕಟ್ಟುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೨) ಇದರ ಸುತ್ತಲೂ ಅಂಗಡಿ ಮಳಿಗೆಗಳನ್ನು ಕಟ್ಟಲು ನಗರಸಭೆಯವರು ತೀರ್ಮಾನ ಕೈಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೩) ಅಂಗಡಿ ಮಳಿಗೆಗಳನ್ನು ಕಟ್ಟಿದಂತೆ ಸಾರ್ವಜನಿಕರಿಂದ ಮನವಿಗಳು ಬಂದಿದೆಯೇ ?

೪) ಅಂಗಡಿ ಮಳಿಗೆಗಳನ್ನು ಕಟ್ಟಿದರೆ ರಂಗ ಮಂದಿರದ ಪರಿಸರ ಹಾಳಾಗುವುದಿಲ್ಲವೆ ? ಹಾಗಿದ್ದಲ್ಲಿ ಇದನ್ನು ತಡೆಯಲು ಸರ್ಕಾರವು ಕ್ರಮ ಕೈಗೊಳ್ಳುವುದೆ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

೧) ಹೌದು.

೨) ಹೌದು.

೩) ಹೌದು.

೪) ಇಲ್ಲ.

ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನಲ್ಲಿ ಬಾಕಿ ವಸೂಲಿಗಾಗಿ ಜನತಾ ಮನೆಗಳನ್ನು ಹರಾಜು ಹಾಗು ಜಪ್ತಿ ಮಾಡುತ್ತಿರುವುದು

೭೯೪ (೪೪೧) ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

೧) ಬಾಕಿ ವಸೂಲಿಗಾಗಿ ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನಲ್ಲಿ ಎಷ್ಟು ಜನತಾ ಮನೆಗಳನ್ನು ಹರಾಜು ಹಾಗೂ ಜಪ್ತಿ ಮಾಡಲಾಗಿದೆ ?

೨) ಇದರಿಂದ ವಸೂಲಾಗಿರುವ ಹಣವೆಷ್ಟು ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

೧) ಬಾಕಿ ವಸೂಲಿಗಾಗಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಯಾವ ಜನತಾ ಮನೆಗಳನ್ನೂ ಸಹ ಹರಾಜು ಹಾಗೂ ಜಪ್ತಿ ಮಾಡಲಾಗಿರುವುದಿಲ್ಲ.

೨) ಉದ್ಭವಿಸುವುದಿಲ್ಲ.